ಕರೆದುಕೊಂಡು ಹೋಗುತ್ತಿದ್ದೆ. ನಾಯಿಗಳನ್ನು ಕಂಡರೆ ಪಂಚಪ್ರಾಣ. ನಮ್ಮ ತಂದೆಗೂ ನಾಯಿಗಳು ಅಂದರೆ ಬಹಳ ಪ್ರೀತಿ. ನಮ್ಮ ಮನೆಯಲ್ಲಿ ಎರಡು ನಾಯಿಗಳಿವೆ. ಅವು ಹೀಗೆ ದಾರಿಯಲ್ಲಿ ಸಿಕ್ಕು ಮನೆ ಸೇರಿದವು. ಒಂದು ನಾಯಿ ಇಲ್ಲೇ 9th mainನಲ್ಲಿ ಸಿಕ್ಕಿತು. ಅದನ್ನು ಎತ್ತಿಕೊಂಡು ಬಂದು ನೈನಿ ಅಂತ ಹೆಸರಿಟ್ಟು ಸಾಕಿಕೊಂಡೆ. ಇನ್ನೊಂದು ಸಂಪಿಗೆ ಮರದ ಹತ್ತಿರ ಸಿಕ್ಕಿತು. ಅದಕ್ಕೆ ಜಾಜಿ ಅಂತ ಹೆಸರಿಟ್ಟು ಸಾಕಿಕೊಂಡೆ. ಮನೆಯ ಹತ್ತಿರ ಬೀದಿ ನಾಯಿ ಎರಡು ಮರಿ ಹಾಕಿತು. ಅವು ಒಂದು ದಿನ ಗೇಟಿನ ಹತ್ತಿರ ಬಂದು ಬಾಲ ಅಲ್ಲಾಡಿಸ್ಕೊಂಡು ನಿಂತಿದ್ದವು. ಗೇಟ್ ತೆಗೆದೆ. ಈಗ ಅವು ಮನೆಯ ಕಾಂಪೌಂಡಿನಲ್ಲಿ ಓಡಾಡ್ಕೊಂಡು, ಆಟ ಆಡ್ಕೊಂಡು ಇರುತ್ತವೆ.

ಪ್ರಕೃತಿ ಬಹಳ ಖುಷಿ ಕೊಡುತ್ತೆ. ಆ ತರಹ ಬೇಕಾದಷ್ಟು ಸಂಗತಿಗಳಿವೆ. ಯಾವತ್ತೂ ನಂಗೆ 'ಅಯ್ಯೋ ಬದುಕಿ ಏನು ಪ್ರಯೋಜನ?' ಅನ್ನಿಸಿಲ್ಲ. ಪ್ರತಿದಿನವೂ ಹೊಸದಿನವಾಗಿಯೇ ಕಾಣುತ್ತೆ. ದಿನವೂ ಮಾಡುವಂತಹದ್ದು, ನೋಡುವಂತಹದ್ದು ಇದ್ದೇ ಇರುತ್ತೆ. ಬದುಕಿಗೊಂದು ಅರ್ಥ ಇದೆ ಅನ್ನಿಸುವುದು ಇವುಗಳಿಂದಲೇ.

## ಇಂಗ್ಲಿಷ್ ಶಿಕ್ಷಕಿಯಾಗಿ

ಮಕ್ಕಳ ಜೊತೆ ಇರೋದು ಬಹಳ ಇಷ್ಟ. ಅವರಿಗೆ ಪಾಠ ಹೇಳುವುದನ್ನು ಬಹಳ ಎಂಜಾಯ್ ಮಾಡುತ್ತೇನೆ. ಅವರ ಜೊತೆ ಇದ್ದಾಗ ವಯಸ್ಸಾದದ್ದು ಗೊತ್ತಾಗುವುದೇ ಇಲ್ಲ. ಅವರಿಗೆ ಹದಿನೆಂಟು ಅಂದರೆ ನಂಗೂ ಅಷ್ಟೇ, ಅದಕ್ಕೆ ಹದಿಮೂರಾದರೆ ನಂಗೂ ಹದಿಮೂರು, ಅದು ಎರಡು ವರ್ಷದ ಮಗು ಅಂದರೆ ನಾನು ಕೂಡ ಅಷ್ಟೇ.

ಈಗಲೂ ಮಕ್ಕಳೊಂದಿಗಿನ ಒಡನಾಟ ನನ್ನ ಜೀವನಕ್ಕೊಂದು ಅರ್ಥ ಕೊಟ್ಟಿದೆ. ಇದೊಂದು ಅದ್ಭುತ ವೃತ್ತಿ ಅಂತಲೇ ಅನ್ನಿಸುತ್ತದೆ. ಪ್ರತಿ ವರ್ಷ ಹೊಸ ಮಕ್ಕಳ ಒಡನಾಟ ನಮ್ಮನ್ನು ಹೊಸತುಗೊಳಿಸುತ್ತಿರುತ್ತದೆ.

ಮಗು ಶಾಲೆಗೆ ಕಾಲಿಟ್ಟ ಕ್ಷಣದಿಂದಲೇ ಇಂಗ್ಲಿಷ್ ಹೇಳಿಕೊಡಬೇಕು ಅಂತಿಲ್ಲ. ಮೊದಲು ಮಗು ತನ್ನ ಭಾಷೆಯಲ್ಲೇ ಕಲಿಯಲು ಶುರುಮಾಡಬೇಕು. ಮಗು ತನ್ನ ಭಾಷೆಯಲ್ಲೇ ಟೀಚರ್ ಜೊತೆ ಮಾತಾಡ್ತಾ ಅದಕ್ಕೊಂದು ಧೈರ್ಯ ಬರಬೇಕು. ಆಮೇಲೆ ನಿಧಾನವಾಗಿ ಬೇರೆ ಭಾಷೆಗಳನ್ನು ಹೇಳಿಕೊಡಬೇಕು. ಜಾಂಬಿಯಾ, ಇಥಿಯೋಪಿಯಾಗಳಲೆಲ್ಲ ಹೈಸ್ಕೂಲು ಮಕ್ಕಳಿಗೆ ಪಾಠ ಮಾಡಿದೆ. ಇಂಗ್ಲೆಂಡಿಗೆ ಬಂದ ಮೇಲೆ ಅಲ್ಲೊಂದು ತರಬೇತಿ ಪಡೆದೆ. ಲಂಡನ್ ಕೌಂಟಿ ಕೌನ್ಸಿಲ್‌ನವರು ಈ ತರಹದ ತರಬೇತಿ ಕೋರ್ಸುಗಳನ್ನು ಮಾಡುತ್ತಿದ್ದರು. **Early childhood learning** ಅಂತ ಒಂದು ವರ್ಷದ ತರಬೇತಿ ನೀಡುತ್ತಿದ್ದರು. ತರಬೇತಿಯ ಅನಂತರ ಅಲ್ಲಿನ ಬೇರೆ ಬೇರೆ ಶಾಲೆಗಳಿಗೆ ಹೋಗಿ ಅಲ್ಲಿ ಶಿಕ್ಷಕರು ಹೇಗೆ ಪಾಠ ಮಾಡುತ್ತಾರೆ ಎನ್ನುವುದನ್ನು ಗಮನಿಸಬೇಕಾಗುತ್ತಿತ್ತು. ಆಮೇಲೆ, ಅಲ್ಲಿನ ಶಾಲೆಯೊಂದರಲ್ಲಿ ಕೆಲಸ ಕೊಟ್ಟರು. ಆ ವಿಧಾನದ ಹೆಸರು **Play way method**. ಅದು ನರ್ಸರಿ ಮಕ್ಕಳಿಗೆ ಕಲಿಸೋ ಒಂದು ವಿಧಾನ. ಆಟದ ಮೂಲಕ ಅವರಿಗೆ ಪಾಠ ಹೇಳಿಕೊಡುವುದು. ಹೀಗೆ ಅಲ್ಲೊಂದು ಹದಿಮೂರು ಹದಿನಾಲ್ಕು ವರ್ಷ ಪಾಠ ಮಾಡಿದೆ. ಆ ಅನುಭವ ಚೆನ್ನಾಗಿತ್ತು.

ಮಕ್ಕಳಿಗೆ ಭಾಷೆ ಕಲಿಸುವಾಗ ಮೊದಲು ಅವರಿಗೆ ಆ ಭಾಷೆ ಸುಂದರವಾದದ್ದು ಅನ್ನೋದು ಮನಸ್ಸಿಗೆ ಬರೋ ಹಾಗೆ ಮಾಡಬೇಕು. ಸರಳವಾಗಿ ಶುರುಮಾಡಿ ಆಮೇಲೆ ಕ್ಲಿಷ್ಟವಾದದ್ದನ್ನ ಹೇಳಿಕೊಡಬೇಕು. ಆಯಾ ಮಗುವಿನ ಗ್ರಹಿಕೆಯ ಸಾಮರ್ಥ್ಯಕ್ಕೆ ತಕ್ಕ ಹಾಗೆ ಅವರೊಂದಿಗೆ ಹೆಜ್ಜೆ ಹಾಕಬೇಕು. ಕಲಿಯುವ ಸಾಮರ್ಥ್ಯ ನಿನಗಿದೆ ಅನ್ನೋ ವಿಶ್ವಾಸವನ್ನು ಮೊದಲು ಮಕ್ಕಳಲ್ಲಿ ಮೂಡಿಸಬೇಕು. ಅದು ಬಹಳ ಮುಖ್ಯ. ಮಕ್ಕಳಿಗೆ ಇದು ಕಷ್ಟ, ನನ್ನ ಕೈಲಾಗೋಲ್ಲ ಅನ್ನೋ ಭಾವನೆ